ಸಿಸಿ ನಂಃ 187/2023

ಸಿ.ಡಬ್ಲೂ 9/

ಪಿ.ಡಬ್ಲೂ5

## 4 ನೇ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ಧಾರವಾಡ.

ಸಾಕ್ಷಿದಾರರ ಹೆಸರು ಃ ಪ್ರವೀಣ

ತಂದೆಯ ಹೆಸರು ಃ ಬಸಲಿಂಗಪ್ಪ ದನಿಗೊಂಡ

ವಯಸ್ಸು ಃ 19 ವರ್ಷ

ಉದ್ಯೋಗ ಃ ವಿದ್ಯಾರ್ಥಿ

ವಾಸ ಸ್ಥಳ ಃ ಹಿರೇಹೊನ್ನಳ್ಳಿ.

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **05.03.2025**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ಮೂರು ವರುಷದ ಹಿಂದೆ ರಾತ್ರಿ 9.00 ರ ಸುಮಾರಿಗೆ ನಾನು , ಗೂಳಪ್ಪ ಮತ್ತು ಚಾಸಾ8 ರವರು ಚಕ್ಕಡಿಯಲ್ಲಿ ಹೊಲಕ್ಕೆ ಹೊಗುತ್ತಿದ್ದಾಗ ಹಿಂದಿನಿಂದ ಬುಲೇರೊ ವಾಹನ ಬಂದು ಡಿಕ್ಕಿ ಪಡಿಸಿತು. ಆಗ ನನ್ನ ಚಿಕ್ಕಪ್ಪ ಸ್ಥಳದಲ್ಲಿ ಮೃತ ಪಟ್ಟಿರುತ್ತಾರೆ. ನನಗೆ ಹಾಗೂ ಚಾಸಾ8 ರವರಿಗೆ ಗಾಯಗಳಾಗಿರುತ್ತವೆ. ನತಂರ ಈ ವಿಷಯವನ್ನು ಚಾಸಾ8 ರವರು ನನ್ನ ತಂದೆಯವರಿಗೆ ಪೊನ ಮಾಡಿ ತಿಳಿಸಿರುತ್ತೇನೆ. ನಂತರ ನಮ್ಮನ್ನು ಸಿವಿಲ್ ಆಸ್ಪತ್ರೆಗೆ ದಾಖಲಿಸಿರುತ್ತಾರೆ. 10 ದಿನ ಬಿಟ್ಟು ಪೋಲಿಸರು ಠಾಣೆ ಕರೆಸಿದ್ದರು ಸದರಿ ಗಾಡಿ ನಂಬರ

ಸಿಸಿ ನಂಃ 187/2023
ಸಿ.ಡಬ್ಲೂ 9/
ಪಿ.ಡಬ್ಲೂ5

ನನಗೆ ನೆನಪಿಲ್ಲ. ಸದರಿ ಗಾಡಿಯನ್ನು ಯಾರು ಚಲಾಯಿಸಿದರು ಗೊತಿತಲ್ಲ. ಚಾಲಕನನ್ನು ತೋರಿಸಿದ್ದರು 3 ವರುಷ ಆಗಿರುವ ಕಾರಣ ನೆನಪಿಲ್ಲ.

**(ಮಾನ್ಯ ಹಿಸಸಅರವರು ಸಾಕ್ಷಿಯನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)**

**ಪಾಟೀಸವಾಲುಃ ಮಾನ್ಯ ಹಿಸಸಅವರಿಂದ**

ದಿಃ 28.02.2022 ರದು ಠಾಣೆ ಗೆ ಕರಸಿ ಬುಲೇರೊ ವಾಹನ ನಂ.ಕೆಎ 49/5874 ತೊರಿಸಿದರು ಎಂದರೆ ಸರಿ. ಅದೇ ರಿತಿ ಅದೇ ದಿನ ಪೋಲಿಸರು ಸದರಿ ಬುಲೇರೊ ವಾಹನದ ಚಾಲಕ ಸಲ್ಮಾನ ಖಾನ ರಫಿಕ ರವರನ್ನು ತೊರಿಸಿದರು ಎಂದರೆ ಸರಿ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ**

1. ಬುಲೇರೊ ವಾಹನ ನಂ.ಕೆಎ 49/5874 ವಾಹನದ ನಂಬರ ಪೋಲಿಸರು ಠಾಣೆಯಲ್ಲಿ ತೊರಿಸಿದ್ದಾರೆ ಎಂದರೆ ಸರಿ. ಅಪಘಾತ ಪಡಿಸಿದ ವಾಹನ ಇದೆ ಎಂದು ಹೆಳಲು ಬರುವುದಿಲ್ಲ ಎಂದರೆ ಸರಿ. ಸದರಿ ವಾಹನ ಯಾರು ಚಲಾಯಿಸುತ್ತಿದ್ದರು ಎಂದು ನಿಖರವಾಗಿ ಹೆಳಲು ಬರುವುದಿಲ್ಲ ಎಂದರೆ ಸರಿ.

ಸಿಸಿ ನಂಃ 187/2023

ಸಿ.ಡಬ್ಲೂ 9/

ಪಿ.ಡಬ್ಲೂ5

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ್)**

4 ನೇ ಹಿ ದಿ ನ್ಯಾಹಾಗೂ ಜೆಎಂಎಫ್‌ಸಿ,

ಧಾರವಾಡ.